ಕೋರಿಕೆಯ ಮೇಲೆ ವರ್ಗಾವಣೆಯಾದ ಅರಣ್ಯ ರಕ್ಷಕರುಗಳಿಗೆ, ಯಾವುದೇ ವರ್ಗಾವಣೆ ಭತ್ಯೆ ಮತ್ತು ಅನುದಾನ ನೀಡಲಾಗುವುದಿಲ್ಲ.

(5) ಬೆಳಗಾಂ ತಾಲ್ಲೂಕು ನೀಲಜಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವ ಬಗ್ಗೆ.

Sri. K. C. Modgekar Desai (Hirebagewadi):– The Zilla Parishad, Belgaum and the Taluka Panchayat Samithi, Belgaum, have long back resolved for opening of a new Rural Veterinary Dispensary at Nilaji, Taluka and District, Belgaum. I had raised this matter on the floor of the House and the Government had assured me that it would open new RVD at Nilaji. Accordingly, the Governmenmt sanctioned new RVD at Nilaji. However, nothing has been done so far in the matter. I would request the Government to make a Budgetary provision during the current year for opening of the new RVD at Nilaji, Taluka and District, Belgaum. The villagers have come forward to make available the land necessary for the establishment of a new RVD at Nilaji.

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ, ಬೆಳಗಾಂ ತಾಲ್ಲೂಕು, ನೀಲಜಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ಇನ್ನೂ ದೊರಕಿರುವುದಿಲ್ಲ. ಸದರಿ ಗ್ರಾಮಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(6) ದಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರ ಜಮೀನಿನ ಸಕ್ರಮ.

ಶ್ರೀ ಜಿ. ರಾಜುಗೌಡ (ಹನೂರು):– ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯ ಸರ್ಕಾರವು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನನ್ನು ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯನ್ನು ಶಾಸಕರುಗಳ ಅಧ್ಯಕ್ಷತೆಯಲ್ಲಿ ನೇಮಿಸಿ ಕಾರ್ಯಾಚರಣೆ ಮಾಡುತ್ತಿರುವುದು ಸರಿಯಷ್ಟೆ. ಕೆಲವು ರೈತರುಗಳು ಬಹಳ ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುವ ಜಮೀನುಗಳು ಸರ್ಕಾರಿ ಕಡತದಲ್ಲಿ ರಸ್ತೆ, ಪರಂಪೋಕು, ಓಣಿ ಪರಂಪೋಕು, ಹಳ್ಳಿ ಪರಂಪೋಕು ಎಂದಿರುತ್ತದೆ. ಆದರೆ ಸಧ್ಯವಿರುವ ಪರಿಸ್ಥಿತಿಯಂತೆ ಅಲ್ಲಿ ಹಳ್ಳವೂ ಇಲ್ಲಾ, ರಸ್ತೆಯೂ ಇಲ್ಲಾ, ಓಣಿಯೂ ಇಲ್ಲಾ. ಆ ಜಮೀನನ್ನು ಸಕ್ರಮಗೊಳಿಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಕೆಲವು ಅಧಿಕಾರಿಗಳು ಇದನ್ನು ಮಾಡಿದರೆ ಸರ್ಕಾರದ ಸೂಚನೆಗೆ ವಿರೋಧವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಮೀನುಗಳನ್ನೇ ನಂಬಿ ಹತ್ತಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳಿಗೆ ತೊಂದರೆಯಾಗುವುದಿಲ್ಲವ? ಆದ್ದರಿಂದ ಸ್ಥಳ ತನಿಖೆ ಮಾಡಿ ಯಾರಿಗೂ ತೊಂದರೆಯಾಗದಿದ್ದರೆ, ಅಂಥ ಜಮೀನನ್ನು ಸಕ್ರಮಗೊಳಿಸಬಹುದೆಂದು ಸರ್ಕಾರ ಸುತ್ತೋಲೆ ಕಳುಹಿಸುವುದರಿಂದ ಅನೇಕ ಜನ ಹರಿಜನರಿಗೂ ಹಿಂದುಳಿದವರಿಗೂ ಅನುಕೂಲವಾಗುತ್ತದೆ. ಸರ್ಕಾರದ ಸೂಚನೆಯಂತೆ ಯಾರು ಬಗೈರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರುಗಳನ್ನು ಒಕ್ಕಲೆಬ್ಬಿಸಬಾರದು ಎಂದು ಇದೆ. ಇಂಥ ಪರಿಸ್ಥಿತಿಯಲ್ಲಿ